UASB LIBRARY
Jai Kisan
Agri Newspaper Clippings
Friday 13-10-2023
Pg. 1

ನಕಲಿ ರಸಗೊಬ್ಬರ, ಬಿತ್ತನೆ ಬೀಜ, ಕೀಟ ನಾಶಕಗಳ ಮಾರಾಟ ಸಂಪೂರ್ಣ ನಿಯಂತ್ರಣಕ್ಕೆ ಕ್ರಮ

ರೈತರ ಹಿತ ಕಾಪಾಡಲು ಸರಕಾರ ಬದ್ಧ

ಬೆಂಗಳೂರು: ರಾಜ್ಯದ ರೈತರ ಹಿತ ಕಾಪಾಡುವುದು ನಮ್ಮ ಸರಕಾರ ಮೊದಲ ಆದ್ಯತೆಯಾಗಿದ್ದು, ಈ ವಿಷಯದಲ್ಲಿ ಯಾವುದೇ ಕಾರಣಕ್ಕೂ ರಾಜಿಯಿಲ್ಲ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಕರ್ನಾಟಕ ರಾಜ್ಯ ಬೀಜ ನಿಗಮ ಮತ್ತು ಕರ್ನಾಟಕ ರಾಜ್ಯ ಸಾವಯವ ಮತ್ತು ಬೀಜ ಪ್ರಮಾಣನ ಸಂಸ್ಥೆಗಳ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿ, ನಕಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜ ಹಾಗೂ ಕೀಟ ನಾಶಕಗಳ ಮಾರಾಟ ಸಂಪೂರ್ಣ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಈ ಸಂಬಂಧ ಜಾಗೃತ ಕೋಶ ಚುರುಕಿನಿಂದ ಕಾರ್ಯ ನಿರ್ವಹಿಸಿ 148 ಪ್ರಕರಣಗಳನ್ನು ದಾಖಲು ಮಾಡಿಕೊಂಡು 11 ಲಕ್ಷ ದಂಡ ಸಂಗ್ರಹ ಮಾಡಲಾಗಿದ್ದು, 15 ಪರವಾನಗಿಗಳನ್ನು ರದ್ದುಗೊಳಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

55,037 ಹೆಕ್ಟರ್‌ನಲ್ಲಿ ಬೀಜೋತ್ಪಾದನೆ: 2022-23ನೇ ಸಾಲಿನಲ್ಲಿ ಒಟ್ಟು 55,037 ಹೆಕ್ಟರ್ ಬೀಜೋತ್ಪಾದನೆ ಕ್ಷೇತ್ರವು ನೋಂದಾಯಿ ತವಾಗಿರುತ್ತದೆ. ಈ ಕ್ಷೇತ್ರದಿಂದ 4,87,161 ಕ್ವಿಂಟಾಲ್ಸ್ ಬೀಜವನ್ನು ಪ್ರಮಾಣೀಕರಿಸಲಾಗಿದೆ. 2021-22ನೇ ಸಾಲಿನಲ್ಲಿ ಒಟ್ಟು 55,257 ಹೆಕ್ಟರ್ ಕ್ಷೇತ್ರ ಬೀಜೋತ್ಪಾದನೆಗೆ ನೋಂದಾಯಿತವಾಗಿರುತ್ತದೆ. ಈ ಕ್ಷೇತ್ರದಿಂದ 5,56,308 ಕ್ವಿಂಟಾಲ್ಸ್ ಬೀಜ ಪ್ರಮಾಣೀಕರಿಸಲಾಗಿರುತ್ತದೆ. 2023ರಲ್ಲಿ ಒಟ್ಟು 15,013 ಹೆಕ್ಟರ್ ಕೇತ್ರ ಬೀಜೋತ್ಪಾದನೆಗೆ ನೋಂದಾವಣೆ ಕಾರ್ಯ ಪ್ರಗತಿಯಲ್ಲಿ ರುತ್ತದೆ. 2023-24ನೇ ಸಾಲಿನಲ್ಲಿ 159 ಬೀಜೋತ್ಪಾದನೆ ಸಂಸ್ಥೆಗಳು ಹಾಗೂ 116 ಬೀಜ ಸಂಸ್ಕರಣ ಘಟಕಗಳು ನೋಂದಾವಣೆಯಾಗಿರುತ್ತದೆ ಎಂದರು.



ರಾಜ್ಯದಲ್ಲಿ 195 ತಾಲೂಕುಗಳಲ್ಲಿ ಬರ ಪರಿಸ್ಥಿತಿ ತಲೆದೋರಿದ್ದು, ಇದನ್ನು ಕೇಂದ್ರಕ್ಕೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ. ಒಟ್ಟಾರೆ 4860 ಕೋಟಿ ರು.ಗಳ ಪರಿಹಾರ ಕೋರಲಾಗಿದೆ. ಹೊಸದಾಗಿ 21 ತಾಲೂಕುಗಳಲ್ಲಿ ಬರ ಪರಿಸ್ಥಿತಿ ತಲೆದೋರಿದ್ದು, ಗ್ರೌಂಡ್ ಟ್ರೂಥಿಂಗ್ ವರದಿಯನ್ನು ಪಡೆಯಲಾಗುತ್ತಿದೆ.

– ಚಲುವರಾಯಸ್ವಾಮಿ ಕೃಷಿ ಸಚಿವ

- ರಾಜ್ಯದ 31 ಜಿಲ್ಲೆಗಳಲ್ಲಿ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳು ಕೊರತೆಯಾಗದಂತೆ ರೈತರಿಗೆ ಪೂರೈಕೆ ಮಾಡಲಾಗಿದೆ.
- ಕೃಷಿ ಭಾಗ್ಯ ಯೋಜನೆ ಮರು ಜಾರಿಗೊಳಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.
- ವಿಶ್ವಬ್ಯಾಂಕ್ ಹಾಗೂ ನೆದರ್‌ಲ್ಯಾಂಡ್ ದೇಶಗಳೊಂದಿಗೆ ಆಧುನಿಕ ಕೃಷಿ ಯೋಜನೆಗಳ ಅನುಷ್ಠಾನಕ್ಕೆ ಚಿಂತನೆ ನಡೆಸಲಾಗಿದೆ.
- ರಿವಾರ್ಡ್ ಯೋಜನೆ ಬಗ್ಗೆ ವಿಶ್ವ ಬ್ಯಾಂಕ್ ಅಧಿಕಾರಿಗಳ ಮೆಚ್ಚುಗೆಯನ್ನು ಪಡೆದಿದೆ

ಸಿರಿಧಾನ್ಯ ಮೇಳ ಆಯೋಜನೆಗೆ ನೆರವು:

ಮಂಡ್ಯ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಸಿರಿಧಾನ್ಯಗಳ ಮೇಳವನ್ನು ಆಯೋಜಿಸಲು ನೆರವು ನೀಡಲಾಗಿದೆ. ಕೃಷಿ ನವೋದ್ಯಮಿಗಳಿಗೆ ಪ್ರೋತ್ಸಾಹಕ್ಕಾಗಿ 10 ಕೋಟಿ ರು.ಗಳನ್ನು ಮೀಸಲಿರಿಸಲಾಗಿದ್ದು ಕಾರ್ಯಕ್ರಮ ಅನುಷ್ಠಾನಕ್ಕೆ ಈಗಾಗಲೇ ಆದೇಶ ಹೊರಡಿಸಲಾಗಿದೆ. ಹೈಟೆಕ್ ಹಾರ್ವೆಸ್ಟರ್ ಹಬ್‌ಗಳ ಸ್ಥಾಪನೆಗೆ ಕ್ರಮವಹಿಸಲಾಗಿದ್ದು 50 ಕೋಟಿ ಮೀಸಲಿರಿಸಲಾಗಿದೆ. ನಟಿ ರೋಗಕ್ಕೆ 224 ಕೋಟಿ ರು.ಗಳ ಪರಿಹಾರ ಮಂಜೂರು ಮಾಡಿ ಇದುವರೆಗೆ 148 ಕೋಟಿ ರು. ಗಳನ್ನು ರೈತರ ಖಾತೆಗಳಿಗೆ ಜಮೆಗೊಳಿಸಲಾಗಿದೆ ಎಂದು ಚಲುವನಾರಾಯಣ ಸ್ವಾಮಿ ತಿಳಿಸಿದರು.

42 ನಾಯಕರು ಕೈ ಸಂಪರ್ಕದಲ್ಲಿ

← ಮೊದಲಪುಟದಿಂದ

ನಾನಾ ಪಕ್ಷಗಳ 42ಕ್ಕೂ ಹೆಚ್ಚು ಮುಖಂಡರ ಅರ್ಜಿಗಳು ನಮ್ಮ ಮುಂದಿವೆ. ಆ ಹೆಸರು ಗಳನ್ನು ಈಗ ಬಹಿರಂಗ ಮಾಡುವುದಿಲ್ಲ. ಅವರೆಲ್ಲರೂ ಹಂತ-ಹಂತವಾಗಿ ಪಕ್ಷಕ್ಕೆ ಸೇರಲಿದ್ದಾರೆ ಎಂದು ಹೇಳಿದರು.

ಸ್ಥಳೀಯ ನಾಯಕರೊಂದಿಗೆ ಚರ್ಚೆ ಮಾಡಿ, ಒಮ್ಮತ ಮೂಡಿಸಿ ಅನ್ಯ ಪಕ್ಷಗಳ ನಾಯಕರುಗಳನ್ನು ಸೇರ್ಪಡೆ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಪ್ರತಿಪಕ್ಷಗಳ ಮೈತ್ರಿಯನ್ನು ಏರೋಧಿಸಿ ಕಾಂಗ್ರೆಸ್ ಪಕ್ಷವನ್ನು ಸೇರುತ್ತಿರುವುದರಿಂದ ರಾಜ್ಯ, ರಾಷ್ಟ್ರಮಟ್ಟದಲ್ಲಿ ನಮ್ಮ ಪಕ್ಷ ಹಾಗೂ ಕಾರ್ಯಕರ್ತರಿಗೆ ಶಕ್ತಿ ತುಂಬಿದಂತಾಗಿದೆ ಎಂದು ಹೇಳಿದರು.

ಬಿಜೆಪಿಯ ಪ್ರಯತ್ನ: ಬಿಜೆಪಿಯ ಕೆಲ ನಾಯಕರು ಕಾಂಗ್ರೆಸ್ ಶಾಸಕರನ್ನು ಸಿನಿಮೀಯ ರೀತಿಯಲ್ಲಿ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ಬಿಜೆಪಿಯವರು ಕಾಂಗ್ರೆಸ್ ನಾಯಕರು, ಶಾಸಕರನ್ನು ಭೇಟಿ ಮಾಡುತ್ತಿದ್ದಾರೆ. ಈ ಭೇಟಿಯ ಬಗ್ಗೆ ನಮ್ಮ ಪಕ್ಷದ ಮುಖಂಡರು, ಶಾಸಕರು ಇಂಚಿಂಚೂ ಮಾಹಿತಿ ನೀಡುತ್ತಿದ್ದಾರೆ. ಈ ಬಗ್ಗೆ ಮಾಧ್ಯಮದವರು ಎಷ್ಟೇ ಚರ್ಚೆಗೆ ಎಳೆದರೂ ನಾನು ಏನನ್ನೂ ಬಿಟ್ಟುಕೊಡುವುದಿಲ್ಲ. ಕೆಲವರು 2024 ರಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತದೆ ಎಂದು ಹೇಳುತ್ತಿದ್ದಾರೆ. ಅದರ ವಿವರಣೆಗೆ ನಾನು ಹೋಗುವುದಿಲ್ಲ. ಆಮ್ ಆದ್ಮಿ ಪಕ್ಷದಿಂದ ಸ್ಪರ್ಧೆ ಮಾಡಿದ 100ಕ್ಕೂ ಹೆಚ್ಚು ಜನ ಅಭ್ಯರ್ಥಿಗಳು ನನ್ನನ್ನು ಭೇಟಿ ಮಾಡಿ, ನಾವು ಇಂಡಿಯದಲ್ಲಿ ಗುರುತಿಸಿಕೊಂಡಿದ್ದು, ನಿಮ್ಮೊಂದಿಗೆ ಕೈ ಜೋಡಿಸುತ್ತೇವೆ ಎಂದು ಹೇಳಿದ್ದಾರೆ. ಬೀದರ್‌ನಿಂದ ಚಾಮರಾಜ ನಗರದ ತನಕ ಕಾಂಗ್ರೆಸ್ ಪಕ್ಷ ಸೇರಲು ಉತ್ಸುಕರಾಗಿದ್ದಾರೆ ಎಂದು ಹೇಳಿದರು.

- ದಿನದಿಂದ ದಿನಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಸೇರುವವರ ಸಂಖ್ಯೆ ಹೆಚ್ಚಾಗುತ್ತಿದೆ
- ವಲಸೆಗೆ ಸಿದ್ದವಾಗಿರುವ ಹಲವರ ಪಟ್ಟಿಯೊಂದಿಗೆ ಶೆಟ್ಟರ್, ಸವದಿ ಚರ್ಚೆ
- ಸ್ಥಳೀಯ ನಾಯಕರೊಂದಿಗೆ ಚರ್ಚಿಸಿ, ಒಮ್ಮತದ ಬಳಿಕವೇ ನಿರ್ಧಾರ

13-10-2023
Viswavani Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in

13-10-2023
Kannadaprabha Pg 06

ಉದ್ಯೋಗಾವಕಾಶ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ಕೃಷಿ ಇಲಾಖೆ | ಸಿಬ್ಬಂದಿ ಕೊರತೆ ನೀಗಿಸಲು ಕ್ರಮ: ಚೆಲುವರಾಯಸ್ವಾಮಿ

1 ಸಾವಿರ ಕೃಷಿ ಅಧಿಕಾರಿಗಳ ನೇಮಕಕ್ಕೆ ಸರ್ಕಾರ ಸಿದ್ಧತೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಗ್ರಾಮೀಣ ಮಟ್ಟದಲ್ಲಿ ಕೃಷಿ ಇಲಾಖೆ ಕಾರ್ಯನಿರ್ವಹಣೆಗೆ ಇರುವ ಸಿಬ್ಬಂದಿ ಕೊರತೆ ನೀಗಿಸುವ ಸಲುವಾಗಿ ಖಾಲಿ ಇರುವ ಹುದ್ದೆಗಳ ಪೈಕಿ 2 ಸಾವಿರ ಸಹಾಯಕ ಕೃಷಿ ಅಧಿಕಾರಿ (ಎಎಒ)ಗಳ ನೇಮಕಕ್ಕೆ ಆರ್ಥಿಕ ಇಲಾಖೆಗೆ ಕೃಷಿ ಇಲಾಖೆ ಪ್ರಸ್ತಾವನೆ ಸಲ್ಲಿಸಿದೆ. ಈ ಪ್ರಸ್ತಾವನೆಗೆ ಒಪ್ಪಿದರೆ ಮೊದಲ ಹಂತದಲ್ಲಿ 1 ಸಾವಿರ ಎಎಒಗಳ ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಕೃಷಿ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಶೇ. 57ರಷ್ಟು ಹುದ್ದೆಗಳು ಖಾಲಿಯಿವೆ. ಅದರಲ್ಲೂ ಗ್ರಾಮ ಪಂಚಾಯತಿ, ಹೋಬಳಿ, ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳೇ ಇಲ್ಲದಂತಾಗಿದೆ. ಹೀಗಾಗಿ 2 ಸಾವಿರ ಹುದ್ದೆಗಳ ನೇಮಕಕ್ಕೆ ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸಲಾಗಿದೆ. ಅದಕ್ಕೆ ಒಪ್ಪಿಗೆ ದೊರೆತರೆ ಮೊದಲ ಹಂತದಲ್ಲಿ 1 ಸಾವಿರ ಎಎಒ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು. ಈ ನೇಮಕಾತಿಯಿಂದ ಗ್ರಾಮೀಣ ಮಟ್ಟದಲ್ಲಿ ಕೃಷಿ ಇಲಾಖೆ ಕಾರ್ಯ ಮಾಡಲು ಸಾಧ್ಯವಾಗಲಿದೆ ಎಂದು ತಿಳಿಸಿದರು.



ಕೃಷಿ ಇಲಾಖೆ ಸಾಧನೆ ವರದಿ ಬಿಡುಗಡೆ ಮಾಡಿದ ಸಚಿವ ಚೆಲುವರಾಯಸ್ವಾಮಿ.

ಕೃಷಿ ಇಲಾಖೆಯಲ್ಲಿ ಹಿರಿಯ ಸಿಬ್ಬಂದಿ, ಅಧಿಕಾರಿಗಳು ಹಲವು ವರ್ಷಗಳಿಂದ ಬಡ್ತಿ ದೊರೆಯದೆ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರು ಮುಂಬಡ್ತಿಗಾಗಿ ಮನವಿ ಸಲ್ಲಿಸಿದ್ದು, ಅದನ್ನು ಈಡೇರಿಸಲಾಗಿದೆ. ಒಟ್ಟು 265 ಎಎಒಗಳಿಗೆ ಕೃಷಿ ಅಧಿಕಾರಿಗಳಾಗಿ ಬಡ್ತಿ ನೀಡಲಾಗಿದೆ. ಅದರ ಜತೆಗೆ ಹೊಸದಾಗಿ 35 ನೌಕರರನ್ನು ನೇಮಕ ಮಾಡಿಕೊಳ್ಳಲೂ ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೆಯೇ ರಾಜ್ಯ ಬೀಜ ನಿಗಮಕ್ಕೆ ಕಿರಿಯ ಸಹಾಯಕ, ಸಹಾಯಕ ವ್ಯವಸ್ಥಾಪಕ, ಬೀಜ ಸಹಾಯಕ ಸೇರಿದಂತೆ 32 ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಅದರಲ್ಲಿ ಗುರುವಾರ 24 ಮಂದಿಗೆ ನೇಮಕಾತಿ ಪತ್ರವನ್ನೂ ನೀಡಲಾಗಿದ್ದು, ಉಳಿದವರಿಗೆ ದಾಖಲೆ ಕೊರತೆ ಕಾರಣ ನೇಮಕಾತಿ ಪತ್ರ ನೀಡಿಲ್ಲ. ಶೀಘ್ರದಲ್ಲಿ ಅವರಿಗೂ ನೇಮಕಾತಿ ಪತ್ರ ವಿತರಿಸಲಾಗುವುದು ಎಂದರು.

ಕೃಷಿ ಇಲಾಖೆ ಕಾರ್ಯದರ್ಶಿ ಅನ್ಬು ಕುಮಾರ್, ಆಯುಕ್ತ ವೈ.ಎಸ್. ಪಾಟೀಲ್, ನಿರ್ದೇಶಕ ಡಾ. ಜಿ.ಟಿ.ಪುತ್ರ ಇತರರಿದ್ದರು.

ಆಕ್ರಮ ತಡೆಗೆ ನಿರಂತರ ದಾಳಿ: ನಕಲಿ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕೀಟನಾಶಕಗಳ ಮಾರಾಟ ತಡೆಗೆ ಕೃಷಿ ಇಲಾಖೆ ಜಾಗೃತ ಕೋಶ ನಿರಂತರ ತಪಾಸಣೆಗಳನ್ನು ನಡೆಸುತ್ತಿದೆ. ಅದರ ಭಾಗವಾಗಿ ಪ್ರಸಕ್ತ ಸಾಲಿನಲ್ಲಿ 148 ಪ್ರಕರಣ ಗಳನ್ನು ದಾಖಲಿಸಿ 5 ಕೋಟಿ ರು. ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಅಲ್ಲದೆ, 15 ಪರವಾನಗಿ ರದ್ದು ಮಾಡಿ, 11 ಲಕ್ಷ ರು. ದಂಡ ವಸೂಲಿ ಮಾಡಲಾಗಿದೆ ಎಂದು ಚೆಲುವರಾಯಸ್ವಾಮಿ ವಿವರಿಸಿದರು.

100 ದಿನಗಳಲ್ಲಿ ಹಲವು ಕಾರ್ಯಕ್ರಮ: ಕೃಷಿ ಸಚಿವನಾಗಿ ಅಧಿಕಾರ ಸ್ವೀಕರಿಸಿದ ನಂತರ ಇಲಾಖೆಯಲ್ಲಿ ಬದಲಾವಣೆ ತರಲು ಪ್ರಯತ್ನಿಸುತ್ತಿದ್ದೇನೆ. ರಾಜ್ಯದಲ್ಲಿ ಸಿರಿಧಾನ್ಯ ಕೃಷಿಗೆ ಉತ್ತೇಜನ ನೀಡಲು ಪ್ರತಿ ಹೆಕ್ಟೇರ್‌ಗೆ 10 ಸಾವಿರ ರು. ಸಹಾಯಧನ ನೀಡಲಾಗುತ್ತಿದೆ. ರೈತರ ಅನುಕೂಲಕ್ಕಾಗಿ ಏಕೀಕೃತ ರೈತ ಕರೆ ಕೇಂದ್ರ ಸ್ಥಾಪನೆ ಮಾಡಲಾಗಿದೆ. ಕಳೆದ ವರ್ಷ ತೊಗರಿ ಬೆಳೆ ನೆಟೆ ರೋಗಕ್ಕೆ ತುತ್ತಾಗಿದ್ದರಿಂದ ಉಂಟಾದ ನಷ್ಟ ಪರಿಹಾರ ನೀಡಲು 224 ಕೋಟಿ ರು. ಮಂಜೂರು ಮಾಡಲಾಗಿದ್ದು, ಈಗಾಗಲೆ 148 ಕೋಟಿ ರು. ಗಳನ್ನು ರೈತರ ಖಾತೆಗೆ ಜಮೆ ಮಾಡಲಾಗಿದೆ. ರಾಜ್ಯದಲ್ಲಿ ಬೆಳೆ ಸಮೀಕ್ಷೆ ಶೇ. 96ರಷ್ಟು ಪೂರ್ಣಗೊಳಿಸಲಾಗಿದ್ದು, ಮುಂದಿನ 3 ದಿನಗಳಲ್ಲಿ ಶೇ. 100ರಷ್ಟು ಮುಗಿಯಲಿದೆ ಎಂದರು.

17ರಿಂದ ವಿಚಾರ ಸಂಕಿರಣ

ಬೆಂಗಳೂರು: ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಿಂದ (ಐಐಎಚ್ ಆರ್) ಅ.17 ರಿಂದ 19 ವರೆಗೆ ವಿದೇಶಿ ಮತ್ತು ಕಡಿಮೆ ಬಳಕೆಯ ತೋಟಗಾರಿಕೆ ಬೆಳೆಗಳ ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಹೆಸರಘಟ್ಟದ ಐಐಆರ್ ಎಚ್ ಸಂಸ್ಥೆಯ ಆವರಣದಲ್ಲಿರುವ ಜಿ.ಎಸ್.ರಾಂಧವ ಸಭಾಂಗಣದಲ್ಲಿ ಮಧ್ಯಾಹ್ನ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋತ್ ಉದ್ಘಾಟಿಸಲಿದ್ದಾರೆ.

13-10-2023
Kannadaprabha Pg 05

13-10-2023
Kannadaprabha Pg 06

ಕೇಂದ್ರದ ವರದಿ ಬಳಿಕ ಬೆಳೆ ಹಾನಿ ಪರಿಹಾರ: ಚೆಲುವ

ಬರದಿಂದ ರಾಜ್ಯದಲ್ಲಿ 39 ಲಕ್ಷ ಹೆಕ್ಟೇರ್ ಬೆಳೆಹಾನಿ | ಈಗ ಮಳೆಯಾದರೂ ಬೆಳೆ ನಷ್ಟ ತಡೆಯಲು ಸಾಧ್ಯವಿಲ್ಲ: ಕೃಷಿ ಸಚಿವ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡವು ಶೀಘ್ರದಲ್ಲಿ ರಾಜ್ಯ ಸರ್ಕಾರಕ್ಕೆ ಸ್ಪಷ್ಟತಾ ವರದಿ ನೀಡಲಿದ್ದು, ಅದಾದ ನಂತರ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ರೈತರಿಗೆ ಮಧ್ಯಂತರ ಬೆಳೆ ಪರಿಹಾರ ನೀಡುವುದು ಸೇರಿದಂತೆ ರೈತರಿಗೆ ಹೇಗೆ ನೆರವಾಗಬೇಕು ಎಂಬ ಬಗ್ಗೆ ನಿರ್ಧರಿಸಲಾಗುವುದು ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ರಾಜ್ಯದಲ್ಲಿ ಸೃಷ್ಟಿಯಾಗಿರುವ ಬರದ ಹಿನ್ನೆಲೆಯಲ್ಲಿ 39.74 ಲಕ್ಷ ಹೆಕ್ಟೇರ್ ಕೃಷಿ ಪ್ರದೇಶದಲ್ಲಿ ಬೆಳೆ ನಷ್ಟವುಂಟಾಗಿದೆ. ಸದ್ಯ ಮಳೆಯಾಗುತ್ತಿದ್ದರೂ, ಬೆಳೆ ನಷ್ಟವನ್ನು ಕಡಿಮೆ ಮಾಡಲು ಸಾಧ್ಯವಾಗುತ್ತಿಲ್ಲ.

ಈ ಎಲ್ಲದರ ಬಗ್ಗೆ ಕೇಂದ್ರ ಸರ್ಕಾರದಿಂದ ಬಂದ ಬರ ಅಧ್ಯಯನ ತಂಡಕ್ಕೂ ಮಾಹಿತಿ ನೀಡಲಾಗಿದೆ. ಅಲ್ಲದೆ, ಕೇಂದ್ರದ ತಂಡವೂ ರಾಜ್ಯದ ಪರಿಸ್ಥಿತಿ ಬಗ್ಗೆ ಅರಿತಿದೆ. ಆದಕ್ಕೆ ತಕ್ಕಂತೆ ಪರಿಹಾರ ನೀಡಲಿದೆ ಎಂಬ ವಿಶ್ವಾಸವಿದೆ ಎಂದರು.



ಮೆಕ್ಕೆಜೋಳ ಹೆಚ್ಚು ಹಾನಿ

ಬರ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 39.74 ಹೆಕ್ಟೇರ್ ಬೆಳೆ ಹಾನಿಯಾಗಿದೆ. ಅದರಲ್ಲಿ 11.84 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೆಳೆಯಲಾಗಿದ್ದ ಮೆಕ್ಕೆ ಜೋಳ ನಾಶವಾಗಿದೆ. ಹಾಗೆಯೇ, 7.16 ಲಕ್ಷ ಹೆಕ್ಟೇರ್ ತೊಗರಿ, 4.45 ಲಕ್ಷ ಹೆಕ್ಟೇರ್ ರಾಗಿ, 4.04 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೆಳೆಯಲಾಗಿದ್ದ ಹತ್ತಿ ನಾಶವಾಗುತ್ತಿದೆ. ಹಾಗೆಯೇ, ನೆಲಗಡಲೆ, ಹಸಿರು ಬೇಳೆ, ಭತ್ತ, ಸೋಯಾಬೀನ್, ಕಬ್ಬು ಸೇರಿದಂತೆ ಇನ್ನಿತರ ಬೆಳೆಗಳೂ ನೀರಿನಲ್ಲಿ ಹಾನಿಯಾಗಿವೆ.

ಆದರೆ, ಕೇಂದ್ರ ಸರ್ಕಾರದಿಂದ ಪರಿಹಾರವು ವಿಳಂಬವಾಗಲಿದ್ದು, ಅದಕ್ಕಾಗಿ ರೈತರಿಗೆ ರಾಜ್ಯ ಸರ್ಕಾರದಿಂದಲೇ ಮಧ್ಯಂತರ ಪರಿಹಾರ ನೀಡುವ ಬಗ್ಗೆಯೂ ಚರ್ಚಿಸಲಾಗುತ್ತಿದೆ. ಕೇಂದ್ರ ತಂಡವು ತನ್ನ ಅಧ್ಯಯನದ ಕುರಿತು ಸ್ಪಷ್ಟತಾ ವರದಿಯನ್ನು ರಾಜ್ಯ ಸರ್ಕಾರಕ್ಕೆ ನೀಡಲಿದೆ. ಅದಾದ ನಂತರ ಸಚಿವ ಸಂಪುಟದಲ್ಲಿ ಚರ್ಚೆ ನಡೆಸಿ ರಾಜ್ಯ ಸರ್ಕಾರದಿಂದ ಬೆಳೆ ಪರಿಹಾರ ನೀಡುವ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

55 ತಾಲೂಕುಗಳ ಮರು ಸಮೀಕ್ಷೆ: ರಾಜ್ಯದಲ್ಲಿ ಮಳೆ ಕೊರತೆ ಇದ್ದರೂ ಕೃಷಿ ಭೂಮಿಯಲ್ಲಿ ಹಸಿರು ಹೊದಿಕೆ ಹೆಚ್ಚಿದೆ. ಹೀಗಾಗಿ ರಾಜ್ಯವು ಹಸಿರು ಬರಗಾಲ ಎದುರಿಸುತ್ತಿದೆ. ಅದರಿಂದಾಗಿ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ನಾಶದಿಂದಾಗಿ 4,030 ಕೋಟಿ ರು. ಪರಿಹಾರ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅದರ ಜತೆಗೆ ಮೇವು, ಔಷಧ, ಆಹಾರ, ಕುಡಿಯುವ ನೀರಿನ ಪೂರೈಕೆ ಸೇರಿದಂತೆ ಇನ್ನಿತರ ಕ್ರಮಗಳಿಗಾಗಿ ಒಟ್ಟು ಬರ ಪರಿಹಾರವಾಗಿ 4,860 ಕೋಟಿ ರು. ನೀಡುವಂತೆ ಕೋರಲಾಗಿದೆ. ಅದರ ಜತೆಗೆ ಸಾಧಾರಣ ಬರ ಎಂದು ಘೋಷಿಸಲಾಗಿರುವ 34 ತಾಲೂಕುಗಳು ಹಾಗೂ ಹೊಸದಾಗಿ ಬರದ ಪಟ್ಟಿಗೆ ಸೇರ್ಪಡೆ ಮಾಡಬೇಕಿರುವ 21 ತಾಲೂಕುಗಳ ಮರು ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಚೆಲುವರಾಯಸ್ವಾಮಿ ತಿಳಿಸಿದರು.

ಪರ್ಯಾಯ ಬೆಳೆಗಳಿಗೆ ಒತ್ತು: ಮಳೆ ಕೊರತೆ ಸಂದರ್ಭದಲ್ಲಿ ರೈತರು ಪರ್ಯಾಯ ಬೆಳೆಗತ್ತ ಹೆಚ್ಚಿನ ಗಮನಹರಿಸಬೇಕು. ಕೃಷಿ ವಿಶ್ವವಿದ್ಯಾಲಯಗಳ ಮೂಲಕ ರೈತರಲ್ಲಿ ಜಾಗೃತಿಯನ್ನೂ ಮೂಡಿಸಲಾಗುತ್ತಿದೆ. ನೀರು ಕಡಿಮೆ ಬಳಕೆಯಾಗುವ ಬೆಳೆಗಳನ್ನು ಬೆಳೆಯುವಂತೆಯೂ ತಿಳಿಸಲಾಗುತ್ತಿದೆ. ಅದರ ಜತೆಗೆ ಹೊಸಬಗೆಯ ತಳಿಗಳ ಸೃಷ್ಟಿಗೂ ಸಂಶೋಧನಾ ವಿಭಾಗ ಕೆಲಸ ಮಾಡುತ್ತಿದೆ ಎಂದು ಚೆಲುವರಾಯ ಸ್ವಾಮಿ ಹೇಳಿದರು.

ಬನ್ನೇರುಘಟ್ಟ ಪಾರ್ಕ್‌ನಲ್ಲಿ ಸಿಗಲಿದೆ ಗೊಬ್ಬರ!

■ **ವಿಕ ಸುದ್ದಿಲೋಕ** ಬೆಂಗಳೂರು

ಬನ್ನೇರುಘಟ್ಟ ಜೈವಿಕ ಉದ್ಯಾನವು ಪ್ರಾಣಿಗಳ ತ್ಯಾಜ್ಯದಿಂದ ಎರೆಹುಳು ಗೊಬ್ಬರವನ್ನು ತಯಾರಿಸಿ ರೈತರು ಹಾಗೂ ಪ್ರವಾಸಿಗರಿಗೆ ಮಾರಾಟ ಮಾಡಲು ಮುಂದಾಗಿದೆ. ಆ ಮೂಲಕ ಮೃಗಾಲಯದ ತ್ಯಾಜ್ಯವನ್ನು ಸದ್ಬಳಕೆ ಮಾಡಿಕೊಂಡು ಆದಾಯವನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ.

''1 ಕೆ.ಜಿ, 3ಕೆ.ಜಿ. ಮತ್ತು 5ಕೆ.ಜಿ. ಚೀಲಗಳಲ್ಲಿ ಎರೆಹುಳು ಗೊಬ್ಬರ ಮಾರಾಟಕ್ಕೆ ಸಿದ್ಧಪಡಿಸಲಾಗುತ್ತಿದೆ. ಸದ್ಯ ಪ್ರಾಯೋಗಿಕ ಯೋಜನೆಯಾಗಿ ಇದನ್ನು ಆರಂಭಿಸಲಾಗಿದೆ. ಹೆಚ್ಚಿನ ಬೇಡಿಕೆ ಬಂದರೆ ಯೋಜನೆಯನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ. ನಮ್ಮಲ್ಲಿ ಕಚ್ಚಾ ವಸ್ತುಗಳಿವೆ. ಆದರೆ, ಗೊಬ್ಬರ ತಯಾರಿಗೆ ಸಾಕಷ್ಟು ಸಮಯ, ಮೂಲಸೌಕರ್ಯ ಅಗತ್ಯವಿದೆ,'' ಎಂದು ಉದ್ಯಾನದ ಕಾರ್ಯ ನಿರ್ವಾಹಕ ಅಧಿಕಾರಿ ಎ.ವಿ. ಸೂರ್ಯಸೇನ್ ಹೇಳಿದರು.

''ಪ್ರಾಣಿಗಳ ತ್ಯಾಜ್ಯದಿಂದ ತಯಾರಾದ ಎರೆಹುಳು ಗೊಬ್ಬರ ಎಲ್ಲಿಯೂ ಅಷ್ಟು ಸುಲಭವಾಗಿ ಸಿಗುವುದಿಲ್ಲ. ಆನೆ ಮತ್ತು ಜಿಂಕೆಗಳಂತಹ ಸಸ್ಯಹಾರಿ ಪ್ರಾಣಿಗಳ ಸಗಣಿಯಿಂದ ತಯಾರಿಸಿದ ಗೊಬ್ಬರವು ಸಾಮಾನ್ಯ ಎರೆಹುಳು ಗೊಬ್ಬರಕ್ಕಿಂತ ಉತ್ತಮ ಗುಣಮಟ್ಟದ್ದಾಗಿರುತ್ತದೆ. ಮಾಂಸಾಹಾರಿ ಪ್ರಾಣಿಗಳ ಮೂತ್ರವನ್ನು ಸೇರಿಸಿ ಗೊಬ್ಬರ ಇನ್ನಷ್ಟು ಪರಿಣಾಮಕಾರಿಯಾಗಿಸಲು ಯೋಜಿಸಿದ್ದೇವೆ,'' ಎಂದರು.



1 ಕೆ.ಜಿ, 3ಕೆ.ಜಿ. ಮತ್ತು 5ಕೆ.ಜಿ. ಚೀಲಗಳಲ್ಲಿ ಮಾರಾಟಕ್ಕೆ ಸಿದ್ಧ

ರೈತರು ಹಾಗೂ ಪ್ರವಾಸಿಗರಿಗೆ ಮಾರಾಟ

''ಇಲ್ಲಿಯವರೆಗೆ ನಾವು ಟನ್‌ಗಳಷ್ಟು ಪ್ರಾಣಿಗಳ ತ್ಯಾಜ್ಯವನ್ನು ದೊಡ್ಡ ಹೊಂಡಕ್ಕೆ ಎಸೆಯುತ್ತಿದ್ದೆವು. ಅದು ಹೇಗಿದ್ದರೂ ಗೊಬ್ಬರವಾಗುತ್ತದೆ. ಈಗ ಗುಣಮಟ್ಟದ ಉತ್ಪನ್ನವನ್ನಾಗಿಸಲಾಗುತ್ತಿದೆ,'' ಎಂದು ಸೂರ್ಯಸೇನ್ ಹೇಳಿದರು.

''ಸದ್ಯ ಗೊಬ್ಬರದ ದರವನ್ನು ಅಂತಿಮ ಗೊಳಿಸಿಲ್ಲ. ಕೆ.ಜಿ.ಗೆ 35-40 ರೂ. ದರ ಇರಿಸಲು ಉದ್ದೇಶಿಸಲಾಗಿದೆ. ಮರು ಬಳಕೆಯ ಹತ್ತಿ ಚೀಲಗಳಲ್ಲಿ ಪ್ಯಾಕೇಜಿಂಗ್ ಪ್ರಕ್ರಿಯೆ ಆರಂಭವಾಗಿದ್ದು, ಶೀಘ್ರವೇ ಮಾರಾಟ ಮಾಡಲು ಉತ್ಸುಕರಾಗಿದ್ದೇವೆ,'' ಎಂದು ಸೇನ್ ಹೇಳಿದರು.

''ಹೆಚ್ಚಿನ ಜನರು ಈಗ ರಾಸಾಯನಿಕ ಗೊಬ್ಬರದ ಬದಲಿಗೆ ಎರೆಹುಳು ಗೊಬ್ಬರ ಬಳಸಲು ಪ್ರಾರಂಭಿಸಿದ್ದಾರೆ. ಉದ್ಯಾನಕ್ಕೆ ಬರುವ ಪ್ರವಾಸಿಗರೂ ಸಹ ಸಾವಯವ ಗೊಬ್ಬರದ ಬಗ್ಗೆ ವಿಚಾರಿಸುತ್ತಿರುತ್ತಾರೆ,'' ಎಂದು ಅಧಿಕಾರಿಗಳು ಹೇಳಿದರು.

''ತಿಂಗಳ ಹಿಂದೆ ಗೊಬ್ಬರ ತಯಾರಿ ಘಟಕವನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ರಕ್ಷಣಾ ಕೇಂದ್ರದ ಆವರಣದಲ್ಲಿರುವ ಘಟಕದಲ್ಲಿ ನಾಲ್ಕು ಕಾರ್ಮಿಕರನ್ನು ನೇಮಿಸಿಕೊಳ್ಳಲಾಗಿದೆ,'' ಎಂದು ವಿವರಿಸಿದರು.

13-10-2023
V-karnataka Pg 10

ಅಪಾರ ಸಂಖ್ಯೆಯ ಆಕಾಂಕ್ಷಿಗಳಿಗೆ ಅವಕಾಶ ವಂಚಿತರಾಗುವ ಆತಂಕ

ಅರಣ್ಯ ವೀಕ್ಷಕ: ಲಿಖಿತ ಪರೀಕ್ಷೆ ಕೈಬಿಟ್ಟ ಸರ್ಕಾರ

• ಸಂತೋಷ ಈ. ಚಿನಗುಡಿ

ಬೆಳಗಾವಿ: ರಾಜ್ಯ ಸರ್ಕಾರ 310 ಅರಣ್ಯ ವೀಕ್ಷಕ (ಡಿ ಗ್ರೂಪ್) ಹುದ್ದೆಗಳ ನೇರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದೆ. ಆದರೆ, ಲಿಖಿತ ಪರೀಕ್ಷೆ ಕೈಬಿಟ್ಟಿದ್ದು ಹಲವು ಆಕಾಂಕ್ಷಿಗಳ ಆತಂಕಕ್ಕೆ ಕಾರಣವಾಗಿದೆ.

ಅರಣ್ಯ ಇಲಾಖೆಯ 13 ವಲಯಗಳಲ್ಲಿ ಖಾಲಿ ಇರುವ ಅರಣ್ಯ ವೀಕ್ಷಕ ಹುದ್ದೆಗಳ ನೇಮಕಾತಿಗೆ ಸೆಪ್ಟೆಂಬರ್ 27ರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅಕ್ಟೋಬರ್ 26ರವರೆಗೆ ಅವಕಾಶವಿದೆ. ದೈಹಿಕ ಸಾಮರ್ಥ್ಯ ಪರೀಕ್ಷೆ ಮುಗಿಸಿ, ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ವೈದ್ಯಕೀಯ ಪರೀಕ್ಷೆ ಬಳಿಕ ನೇಮಕಾತಿ ಆದೇಶ ಕೊಡಲಾಗುತ್ತಿತ್ತು.

ಆದರೆ, ಈ ಬಾರಿ ಪ್ರವೇಶ ಪರೀಕ್ಷೆ ಕೈಬಿಡಲಾಗಿದೆ. ದೈಹಿಕ ಸಾಮರ್ಥ್ಯ ಪರೀಕ್ಷೆ ಮುಗಿದ ಬಳಿಕ ಎಸ್ಸೆಸ್ಸೆಲ್ಸಿ ಅಂಕಗಳ ಮೆರಿಟ್ ಆಧರಿಸಿ ನೇಮಕಾತಿ ಮಾಡಿಕೊಳ್ಳುವುದಾಗಿ ಅಧಿಸೂಚನೆ ತಿಳಿಸಿದೆ.

ಕಾರಣವೇನು: '2011, 2016 ಹಾಗೂ 2018ರ ನೇಮಕಾತಿ ಸಂದರ್ಭದಲ್ಲಿ ದೈಹಿಕ ಸಾಮರ್ಥ್ಯ ಮತ್ತು ಲಿಖಿತ ಪರೀಕ್ಷೆ ಇತ್ತು. 2019ರಲ್ಲಿ ಕೋವಿಡ್ ಕಾರಣ ನೇಮಕಾತಿ ನಿಯಮ ಬದಲಿಸಿ, ಲಿಖಿತ ಪರೀಕ್ಷೆ ಕೈಬಿಡಲಾಯಿತು. ಆದರೆ, ಆಗ ನೇಮಕಾತಿ ನಡೆಯಲಿಲ್ಲ. ಅದೇ ಹಳೆಯ ಆದೇಶವನ್ನು ಕೋವಿಡ್ ನಂತರದ ನೇಮಕಾತಿಗಳಿಗೂ ಅನ್ವಯ ಮಾಡಲಾಗಿದೆ' ಎಂದು ಆಕಾಂಕ್ಷಿಗಳು ದೂರುತ್ತಾರೆ.

'ಅರಣ್ಯ ವೀಕ್ಷಕ ಹುದ್ದೆಗೆ ಎಸ್ಸೆಸ್ಸೆಲ್ಸಿ ಶಿಕ್ಷಣ ಮಾತ್ರ ಮಾನದಂಡ. 2019 ಮತ್ತು 2020ರ ಬ್ಯಾಚ್‌ನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನೆಪ ಮಾತ್ರಕ್ಕೆ ನಡೆಯಿತು. 'ಕೋವಿಡ್ ಬ್ಯಾಚ್'ನ ಅಪಾರ ಸಂಖ್ಯೆ ವಿದ್ಯಾರ್ಥಿಗಳು ಶೇ 95ಕ್ಕೂ ಹೆಚ್ಚು ಫಲಿತಾಂಶ ಪಡೆದಿದ್ದಾರೆ. ಮೆರಿಟ್ ಆಧಾರದ ಮೇಲೆ ನೇಮಕಾತಿಯಾದರೆ, 19 ರಿಂದ 20 ವರ್ಷದ ವಯೋಮಾನದವರೇ ಹೆಚ್ಚು ನೇಮಕ ಆಗಬಹುದು. 20 ರಿಂದ 30 ವರ್ಷ ವಯೋಮಾನದವರಿಗೆ ಅವಕಾಶ ಸಿಗುವುದಿಲ್ಲ' ಎಂದು ಅವರು ಹೇಳುತ್ತಾರೆ.

ಮೀಸಲಾತಿಯೂ ಇಲ್ಲ: 'ಯೋಜನಾ ನಿರಾಶ್ರಿತರಿಗೆ ನೇಮಕಾತಿಯಲ್ಲಿ ಶೇ 5ರಷ್ಟು ಹುದ್ದೆ ಮೀಸಲಿಡಬೇಕು ಎಂಬುದು ನಿಯಮ. ಈ ಬಾರಿಯ ಅಧಿಸೂಚನೆಯಲ್ಲಿ ಅದನ್ನೂ ಕೈಬಿಡಲಾಗಿದೆ. 3ಎ, 3ಬಿ ವರ್ಗಗಳಿಗೂ ಯಾವುದೇ ಮೀಸಲಾತಿ ನಿಗದಿ ಮಾಡಿಲ್ಲ. 2ಎ ವರ್ಗದವರಿಗೆ ಮಾತ್ರ 5 ಸೀಟ್ ಇಡಲಾಗಿದೆ. ಈ ಎಲ್ಲ ಗೊಂದಲ ನಿವಾರಿಸಿ ಹೊಸ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಇಲ್ಲದಿದ್ದರೆ, ತಡೆಯಾಜ್ಞೆ ತರಲು ಮುಂದಾಗುತ್ತೇವೆ' ಎಂದು ಆಕಾಂಕ್ಷಿ ಮಲ್ಲಪ್ಪ ಅರಕೇರಿ ಹೇಳುತ್ತಾರೆ.

'ಗೆಜೆಟ್ ನೋಟಿಫಿಕೇಷನ್ ಪಾಲನೆ'

'2019ರಲ್ಲಿ ಮಾಡಿದ ಲಿಖಿತ ಪರೀಕ್ಷೆ ಕೈಬಿಟ್ಟು ಗೆಜೆಟ್ ನೋಟಿಫಿಕೇಷನ್ ಹೊರಡಿಸಲಾಗಿದೆ. ಅದನ್ನು ಆಧರಿಸಿ ಅರಣ್ಯ ವೀಕ್ಷಕರ ನೇಮಕಾತಿ ಮಾಡಲಾಗುತ್ತಿದೆ. 2019- 20ರಲ್ಲಿ ಎಸ್ಸೆಸ್ಸೆಲ್ಸಿ ಪಾಸಾದವರು ಹೆಚ್ಚು ಅಂಕ ಪಡೆದಿದ್ದಾರೆ ಎಂಬ ಕಾರಣಕ್ಕೆ ಈ ನೇಮಕಾತಿಗೆ ತಕರಾರು ಮಾಡುವುದು ಸರಿಯಲ್ಲ. ಆಗ ಕೋವಿಡ್ ಕಾರಣ ಮಕ್ಕಳಿಗೆ ಪಾಠಗಳೇ ನಡೆದಿಲ್ಲ ಎಂಬುದನ್ನೂ ಗಮನಿಸಬೇಕು' ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಪಡೆ ಮುಖ್ಯಸ್ಥ ಬ್ರಿಜೇಶ್‌ಕುಮಾರ್ ದೀಕ್ಷಿತ 'ಪ್ರಜಾವಾಣಿ'ಗೆ ತಿಳಿಸಿದರು.

2019ರಲ್ಲಿ ಅನಿವಾರ್ಯ ಕಾರಣ ಬದಲಾಯಿಸಿದ ನಿಯಮವನ್ನು ಈಗಲೂ ಮುಂದುವರಿಸಿದ್ದು ಸರಿಯಲ್ಲ. ಸರ್ಕಾರ ಹೊಸ ಆದೇಶ ಹೊರಡಿಸಬೇಕು – ಮಲ್ಲಪ್ಪ ಅರಕೇರಿ, ಉದ್ಯೋಗಾಕಾಂಕ್ಷಿ, ಬಾಗಲಕೋಟೆ

ಐದು ವರ್ಷಗಳ ನಂತರ ಸರ್ಕಾರ ನೇಮಕಾತಿ ಮಾಡಿಕೊಳ್ಳುತ್ತಿದೆ. ಮೆರಿಟ್ ಆಧಾರದಲ್ಲಿ ನೇಮಕ ಮಾಡಿದರೆ ಹಳೆಯ ಬ್ಯಾಚ್‌ನವರಿಗೆ ಅನ್ಯಾಯವಾಗುತ್ತದೆ- ಕಿರಣ್ ರಾಜ್, ಉದ್ಯೋಗಾಕಾಂಕ್ಷಿ, ಬೆಳಗಾವಿ

13-10-2023
Prajavani Pg 09

ಕಿಸಾನ್ ಸಮ್ಮಾನ್ ಯೋಜನೆಯ ಮೊತ್ತ 6,000ದಿಂದ 8,000 ರೂ.ಗೆ ಏರಿಕೆ ಸಂಭವ

ರೈತರಿಗೆ ಇನ್ನೂ ₹2,000 ಮೋದಿ ಗಿಫ್ಟ್?

ಹೊಸದಿಲ್ಲಿ: 2024ರ ಲೋಕಸಭೆ ಚುನಾವಣೆಗೂ ಮುನ್ನವೇ ಕೇಂದ್ರ ಸರಕಾರವು ರೈತರಿಗೆ 2,000 ರೂ. ಉಡುಗೊರೆ ನೀಡುವ ಸಾಧ್ಯತೆ ಇದೆ ಎಂದು ಬ್ಲೂಮ್‌ಬರ್ಗ್ ವರದಿ ಮಾಡಿದೆ.



ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಸಣ್ಣ ರೈತರಿಗೆ ವಾರ್ಷಿಕವಾಗಿ ನೀಡುವ 6,000 ರೂ.ಗಳನ್ನು 8,000 ರೂ.ಗೆ ಹೆಚ್ಚಿಸಬಹುದು. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ರೈತರ ಮತಬ್ಯಾಂಕ್ ಅನ್ನು ಬಲಪಡಿಸಲು ಸರಕಾರ ಬಯಸಿದೆ. ಈ ವಿಚಾರವಾಗಿ ಸರಕಾರದ ಹಂತದಲ್ಲಿ ಚರ್ಚೆಗಳು ನಡೆದಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ, ಈ ಬಗ್ಗೆ ಪ್ರತಿಕ್ರಿಯಿಸಲು ಹಣಕಾಸು ಸಚಿವಾಲಯದ ವಕ್ತಾರರು ನಿರಾಕರಿಸಿದ್ದಾರೆ.



ಈ ಯೋಜನೆ ಜಾರಿಯಾದರೆ, ಪ್ರಸಕ್ತ ಹಣಕಾಸು ವರ್ಷ 2023-24ರಲ್ಲಿ ಸರಕಾರವು 20,000 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಖರ್ಚು ಮಾಡಬೇಕಾಗುತ್ತದೆ. ಪ್ರಸ್ತುತ ಯೋಜನೆಗಾಗಿ ಮೋದಿ ಸರಕಾರವು 60,000 ಕೋಟಿ ರೂ. ಮೀಸಲಿಟ್ಟಿದೆ.

ಮಧ್ಯಂತರ ಬಜೆಟ್‌ನಲ್ಲಿ ಘೋಷಣೆ ಸಾಧ್ಯ

2024ರ ಫೆಬ್ರವರಿ 1ರಂದು ಮೋದಿ ಸರಕಾರವು ಲೋಕಸಭೆ ಚುನಾವಣೆಗೆ ಮೊದಲು ಮಧ್ಯಂತರ ಬಜೆಟ್ ಅನ್ನು ಮಂಡಿಸುತ್ತದೆ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ರೈತರಿಗೆ ನೀಡುವ ಮೊತ್ತವನ್ನು ಹೆಚ್ಚಿಸುವ ನಿರ್ಧಾರವನ್ನು ಮಧ್ಯಂತರ ಬಜೆಟ್‌ನಲ್ಲಿ ಪ್ರಕಟಿಸುವ ಸಾಧ್ಯತೆ ಇದೆ.

13-10-2023
V-karnataka Pg 06

13-10-2023
Hindu Pg 08

Drought during kharif is expected to cause nearly 50% drop in food production: Agriculture Minister

Crops such as paddy, ragi, toor, groundnut, cotton, and jowar have been lost and depending on the region, officials have been directed to suggest alternative crops to farmers, he says

The Hindu Bureau
BENGALURU

With the south-west monsoon ending with deficit and erratic rainfall, the food production in Karnataka is estimated to come down from a projected 111 lakh tonnes to 58 lakh tonnes owing to damage to crops.

The highest crop loss has been reported with maize in 11.84 lakh hectares, followed by toor in 7.16 lakh hectares, ragi in 4.45 lakh hectares, cotton in 4.04 lakh hectares, groundnut and sugarcane in 2.7 lakh hectares, soyabean in 2.2 lakh hectares, paddy in 1.33 lakh hectares and bajra/minor millets in 1.08 lakh hectares. The total loss, according to the Agriculture Department figures, is pegged at 39.74 lakh hectares.



Members of a Central team inspecting the crop loss at Chachadi village in Belagavi district recently.

Drought has been declared in 195 taluks in the State.

Alternatives suggested

"Drought condition in the State during this kharif is expected to cause a near 50% drop in food production. Efforts will be made to balance the food production in retreating monsoon," Agriculture Minister N. Cheluvarayaswamy told reporters here on Thursday. "Crops such as paddy, ragi, toor, groundnut, cotton, and jowar have been lost. Depending on the region, the officials have been directed to suggest alternative crops to the farmers."

According to the data provided by the Agriculture Department, the State had reported a 89% sowing in the total cultivable area of 118 lakh hectare. Of the total sown area, crops in a total of 41.52 lakh hectares have been lost, which included agriculture crops in 39.74 lakh hectares and horticulture crops in 1.82 lakh hectares. The total loss of agriculture and horticulture crops has been estimated to be around ₹3,824 crore and ₹206 crore, respectively.

Compensation

The Minister said that while July saw 29% excess rainfall than the normal, August reported a deficit of 73% that damaged the crops. He said that ₹48 crore compensation is being given to 60,381 farmers, who were unable to sow.

He pointed out as per the NDRF norms, farmers will receive ₹25,000 per hectare in irrigated land and ₹13,600 per hectare in dry land. In Karnataka, more than a thousand farmers have committed suicide, including 313 farmers in 2023-2024.

Poor quality seeds

Meanwhile, the vigilance cell in the Agriculture Department in the State has seized more than ₹5 crore worth of poor quality sowing seeds, fertilizers and insecticides and has registered 148 cases in this connection.

Mr. Cheluvarayaswamy said that a total of 15 licences have been cancelled, including 8 issued for fertilizers, 4 for seeds and 3 for insecticides. Stating that the court has settled 38 cases by imposing a fine of ₹11.05 lakh on producers and sellers, the Minister said that 16 cases have been filed after insecticide traces were found in organic products.

He said that over the last five years, the vigilance cell has seized ₹38.71 crore worth of poor quality seeds, fertilizers and insecticides and has filed 538 cases over the last five years.

The Minister also said that the department has sent a proposal to fill up 2,000 vacancies in the department of which at least 1,000 vacancies will be filled in the first phase.

Agriculture crop loss in Karnataka

Crop	Extent of loss (in hectares)
Paddy	1,33,654
Ragi	4,45,037
Maize	11,84,762
Bajra/ minor millets	1,08,971
Toor	7,16,994
Green gram	1,11,483
Groundnut	2,70,966
Soyabean	2,20,400
Cotton	4,04,421
Sugarcane	2,72,385
Tobacco	252

> While July saw 29% excess rainfall than the normal, August reported a deficit of 73% that damaged the crops. Compensation of ₹48 crore is being given to 60,381 farmers, who were unable to sow.
>
> **N. CHELUVARAYASWAMY**
> Agriculture Minister

ವಿಟಮಿನ್, ಖನಿಜಾಂಶ ಹಾಗೂ ಪೋಷಕಾಂಶಗಳ ಸಮೃದ್ಧ ಆಹಾರ

ಮೊಟ್ಟೆಯಿಂದ ಸಿಗಲಿದೆ ಅಗತ್ಯ ಪೋಷಣೆ

ಮೊಟ್ಟೆಯು ಉತ್ತಮ ಗುಣಮಟ್ಟದ ಪ್ರೋಟೀನ್, ಕೊಬ್ಬು ಕರಗುವ ವಿಟಮಿನ್‌ಗಳು, ನೀರಿನಲ್ಲಿ ಕರಗುವ ವಿಟಮಿನ್‌ಗಳು ಹಾಗೂ ಖನಿಜಾಂಶಗಳು ಮತ್ತು ಪೋಷಕಾಂಶಗಳಿಂದ ಸಮೃದ್ಧವಾಗಿದೆ ಎಂದು ಶೀಲಾ ಕೃಷ್ಣಸ್ವಾಮಿ ಅವರು ಲೇಖನದಲ್ಲಿ ವಿವರವಾಗಿ ಹೇಳಿದ್ದಾರೆ.



1996 ರಲ್ಲಿ ಆಸ್ಟ್ರಿಯಾ ದೇಶದ ವಿಯೆನ್ನಾದಲ್ಲಿ ಮೊಟ್ಟ ಮೊದಲ ಬಾರಿಗೆ 'ವಿಶ್ವ ಮೊಟ್ಟೆ ದಿನ'ವನ್ನು ಆಚರಿಸಲಾಯಿತು. ಅಲ್ಲಿಂದ ಪ್ರಚಲಿತಕ್ಕೆ ಬಂದ ಮೊಟ್ಟೆ ದಿನ ಪ್ರತಿ ವರ್ಷ ಅಕ್ಟೋಬರ್ ಮಾಸದ 2ನೇ ಶುಕ್ರವಾರ ಮೊಟ್ಟೆಯ ಶಕ್ತಿಯ ಬಗ್ಗೆ ತಿಳಿವಳಿಕೆ ನೀಡಲು ನಿರ್ಧರಿಸಲಾಯಿತು. ಪ್ರಸಕ್ತ ವರ್ಷದಲ್ಲಿ 'ಆರೋಗ್ಯಕರ ಭವಿಷ್ಯಕ್ಕಾಗಿ ಮೊಟ್ಟೆಗಳು' ಎಂಬ ವಿಷಯಾಧಾರಿತವಾಗಿ ಮೊಟ್ಟೆಯ ಪೌಷ್ಟಿಕಾಂಶದ ಪ್ರಯೋಜನಗಳ ಅರಿವು ಮೂಡಿಸಲು ಹೆಚ್ಚು ಒತ್ತು ಕೊಡಲಾಗಿದೆ. ಆ ಮೂಲಕ ಕೆಲವು ಪೌಷ್ಟಿಕಾಂಶದ ಕೊರತೆಗಳ ನಿವಾರಣೆಗೆ ಈ ಲೇಖನ ಸಹಾಯಕವಾಗಲಿದೆ.

ಭಾರತದಲ್ಲಿ ಮಾಂಸ ಸೇವಿಸದ ಕೆಲವು ಸಸ್ಯಾಹಾರಿಗಳೂ ಸೇರಿದಂತೆ ಅನೇಕರು ಮೊಟ್ಟೆಗಳನ್ನು ಸೇವಿಸುತ್ತಾರೆ. ಮೊಟ್ಟೆಯಲ್ಲಿ ಉತ್ತಮ ಗುಣಮಟ್ಟದ ಪ್ರೋಟೀನ್, ಕೊಬ್ಬಿನಲ್ಲಿ ಕರಗುವ ವಿಟಮಿನ್‌ಗಳು, ನೀರಿನಲ್ಲಿ ಕರಗುವ ವಿಟಮಿನ್‌ಗಳು ಮತ್ತು ಖನಿಜಾಂಶಗಳು ಸೇರಿದಂತೆ ಪೋಷಕಾಂಶಗಳಿಂದ ಭರಿತವಾಗಿದೆ. ಮೊಟ್ಟೆಯ ಹಳದಿ ಭಾಗ (ಹಳದಿ ಲೋಳೆ) ಹಾಗೂ ಮೊಟ್ಟೆಯ ಬಿಳಿ ಭಾಗ ಪ್ರೋಟೀನ್ ಅಂಶವನ್ನು ಹೊಂದಿರುತ್ತದೆ. ಆದ್ದರಿಂದ ಹಳದಿ ಭಾಗವನ್ನು ಬಿಟ್ಟು ಬಿಳಿ ಭಾಗ ಮಾತ್ರ ತಿನ್ನುವುದು ದಡ್ಡತನವಾಗುತ್ತದೆ. ಮೊಟ್ಟೆಯ ಹಳದಿ ಲೋಳೆಯನ್ನು ತಿನ್ನಲು ಅನೇಕ ಮಂದಿ ಭಯಪಡುತ್ತಾರೆ. ಇದರಲ್ಲಿ ಸರಿಸುಮಾರು 183 ಮಿಲಿ ಗ್ರಾಂ ಕೊಲೆಸ್ಟ್ರಾಲ್ ಹಾಗೂ ಕೇವಲ ಒಂದೂವರೆ ಗ್ರಾಂನಷ್ಟು ಮಾತ್ರ ಸ್ಯಾಚುರೇಟೆಡ್ ಕೊಬ್ಬನ್ನು ಹೊಂದಿರುತ್ತದೆ. ದಿನವೊಂದಕ್ಕೆ ಬೇಕಾಗುವಷ್ಟು ಹಾಗೂ ಶಿಫಾರಸು ಮಾಡಿದ ಪ್ರಮಾಣದಲ್ಲಿ ಪೋಷಕಾಂಶಗಳು ಇದರಲ್ಲಿತ್ತವೆ.

ಹಳದಿ ಲೋಳೆಯಲ್ಲಿ ಮೊಟ್ಟೆಯ ಬಿಳಿಭಾಗಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿಟಮಿನ್ ಬಿ1, ಬಿ3, ಬಿ5, ಬಿ6, ಬಿ7 ಮತ್ತು ಬಿ9 ನಿಂದ ಕೂಡಿರುತ್ತದೆ. ವಿಟಮಿನ್ ಡಿ ಹೆಚ್ಚಿನ ಪ್ರಮಾಣದಲ್ಲಿ ಮೊಟ್ಟೆಯ ಹಳದಿ ಲೋಳೆಯಲ್ಲಿದೆ. ಇದು ವಿಟಮಿನ್‌ನ ಕೆಲವು ನೈಸರ್ಗಿಕ ಆಹಾರ ಮೂಲಗಳಲ್ಲಿ ಒಂದಾಗಿದೆ. ಅಲ್ಲದೆ, ಮೊಟ್ಟೆಯ ಹಳದಿ ಲೋಳೆಯು ವಿಟಮಿನ್ ಇ, ಕೆ ಮತ್ತು ಕ್ಯಾರೊಟಿನಾಯ್ಡ್‌ಗಳ ಮೂಲವಾಗಿದೆ. ಹಳದಿ ಲೋಳೆಗೆ ಹೋಲಿಸಿದರೆ ಮೊಟ್ಟೆಯ ಬಿಳಿಭಾಗವು ಕಡಿಮೆ ಕೊಬ್ಬನ್ನು ಹೊಂದಿರುತ್ತದೆ.

100 ಗ್ರಾಂನ ಒಂದು ಸಂಪೂರ್ಣ ಮೊಟ್ಟೆಯಲ್ಲಿ 49.40 ಮಿಲಿ ಗ್ರಾಂ ಕ್ಯಾಲ್ಸಿಯಂ, 1.82 ಮಿಲಿ ಗ್ರಾಂ ಕಬ್ಬಿಣ, 1.20 ಮಿಲಿ ಗ್ರಾಂ ಸತು, 198 ಎಂಸಿಜಿ ವಿಟಮಿನ್ ಎ, 49.30 ಎಂಸಿಜಿ ಡಯೆಟರಿ ಫೋಲೇಟ್, 1.80 ಎಂಸಿಜಿ ವಿಟಮಿನ್ ಬಿ 12 ಇರುತ್ತದೆ. ಇಷ್ಟೇ ಅಲ್ಲದೆ, ಎರಡು ಪ್ರಮುಖ ಕ್ಯಾರೊಟಿನಾಯ್ಡ್‌ಗಳಿವೆ. ಒಂದು ಲುಟೀನ್ ಮತ್ತೊಂದು ಜಿಯಾಕ್ಸಾಂಥಿನ್. ಆದರೆ, ಮೊಟ್ಟೆಗಳು ಫುಡ್ ಫೈಬರ್ ಮತ್ತು ವಿಟಮಿನ್ ಸಿ ಅನ್ನು ಒಳಗೊಂಡಿಲ್ಲ ಹಾಗೂ ಅವುಗಳು ಕಡಿಮೆ ಪ್ರಮಾಣದ ಕಾರ್ಬೋಹೈಡ್ರೇಟ್ ಹೊಂದಿರುತ್ತವೆ ಎಂಬುದು ತಿಳಿಯಬೇಕಾಗಿದೆ.

ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ಪೋಷಕಾಂಶಗಳ ಕೊರತೆಗಳಲ್ಲಿ ಕಬ್ಬಿಣ, ವಿಟಮಿನ್ ಡಿ, ವಿಟಮಿನ್ ಎ ಮತ್ತು ವಿಟಮಿನ್ ಬಿ 12 ಆಗಿದ್ದು, ಈ ಎಲ್ಲಾ ಪೋಷಕಾಂಶಗಳು ಮೊಟ್ಟೆಯಲ್ಲಿ ಮಾತ್ರ ಕಂಡುಬರುತ್ತವೆ. ಆದ್ದರಿಂದ ಪೋಷಕಾಂಶಗಳ ಕೊರತೆಯಿರುವವರಿಗೆ ಇದು ಉಪಯುಕ್ತ ಆಹಾರ.

ಮೊಟ್ಟೆಯನ್ನು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಇದನ್ನು ಸೇವಿಸಬಹುದು. ಮೊಟ್ಟೆ ಸೇವನೆಯಿಂದ ಅಲರ್ಜಿ ಆಗುತ್ತದೆ ಎನ್ನುವವರು ಹಾಗೂ ಮಕ್ಕಳು ಮೊಟ್ಟೆ ವಿಶೇಷವಾಗಿ ಮೊಟ್ಟೆ ಸೇವಿಸಬಾರದು. ಆಹಾರದ ಶಿಫಾರಸು ಮಾಡಿದವರು ಮಾತ್ರ ಇದರಿಂದ ಹೊರತಾಗಿರುತ್ತಾರೆ. (ಉದಾ: ಕಡಿಮೆ ಪ್ರೋಟೀನ್ ಆಹಾರ, ಕಡಿಮೆ ಕೊಲೆಸ್ಟ್ರಾಲ್ ಆಹಾರ). ಫ್ಯಾಕ್ಟರಿ ಮತ್ತು ಕೋಳಿ ಸಾಕಣೆಯ ವಾಣಿಜ್ಯ ಮೊಟ್ಟೆಗಳಿಗಿಂತ ಮುಕ್ತವಾಗಿ ತಿರುಗಾಡುವ ಕೋಳಿಗಳ ಮೊಟ್ಟೆಗಳಿಗೆ ಹೆಚ್ಚಿನ ಬೇಡಿಕೆಯಿದೆ. ಇದಕ್ಕೆ ಕಾರಣ ಪರಿಸರ ಕಾಳಜಿ ಮತ್ತು ಪ್ರಾಣಿ, ಪಕ್ಷಿಗಳ ಬಗ್ಗೆ ಮಾನವನ ನಡೆಯಾಗಿದೆ. ಮುಖ್ಯವಾದ ಸಂಗತಿ ಎಂದರೆ, ಮೊಟ್ಟೆಗಳನ್ನು ಬೇಯಿಸದೆ ಕಚ್ಚಾ ರೂಪದಲ್ಲಿ ತಿನ್ನುವುದಕ್ಕಿಂತ ಬೇಯಿಸಿ ಸೇವಿಸುವುದು ಸೂಕ್ತ. ಇದರಿಂದ ಪಚನಕ್ರಿಯೆ ಸುಧಾರಣೆ ಹಾಗೂ ಸಾಲ್ಮೊನೆಲ್ಲಾ ಸೋಂಕನ್ನು ತಡೆಗಟ್ಟಬಹುದು.

ಪ್ರಸ್ತು3: ಪಿ.ವಿ. ಬ್ಯಾಂಡ್ ಸ್ವಾಟ್

ಮೊಟ್ಟೆ ಸೇವಿಸುವ ವಿಧಾನಗಳು

ಬೇಯಿಸಿದ ಮೊಟ್ಟೆ : ಉಪ್ಪು ಮತ್ತು ಮೆಣಸು ಹಾಕಿದ ಮೊಟ್ಟೆ ತಿನ್ನಲು ಇದು ಆರೋಗ್ಯಕರ ವಿಧಾನ.

ಸ್ಕ್ರಾಂಬಲ್ಡ್ ಮೊಟ್ಟೆ: ಉಪ್ಪು ಮತ್ತು ಮೆಣಸು, ಕೆಲವೊಮ್ಮೆ ಹಾಲು ಮತ್ತು ಬೆಣ್ಣೆ ಅಥವಾ ಬಾದ್ಯತೈಲ ಸೇರಿಸಲಾಗುತ್ತದೆ. ಬೆಣ್ಣೆ ಅಥವಾ ತೈಲ ಸೇರ್ಪಡೆಯ ಭಕ್ಷ್ಯದಿಂದ ಕೊಬ್ಬಿನಂಶ ಹೆಚ್ಚಿಸುತ್ತದೆ ಮತ್ತು ಎಲ್ಲರಿಗೂ ಇದು ಸೂಕ್ತ ಆಗದಿರುವ ಸಾಧ್ಯತೆ ಇದೆ.

ಹುರಿದ ಮೊಟ್ಟೆ: ಎಣ್ಣೆ ಅಥವಾ ಬೆಣ್ಣೆಯಿಂದ ಇದನ್ನು ತಯಾರಿಸಲಾಗುತ್ತದೆ. ಉಪ್ಪು ಮತ್ತು ಮೆಣಸು ಕಾಳಿನ ಪುಡಿ ಸೇರಿಸಿ ತಿನ್ನಲಾಗುತ್ತದೆ. ತೈಲಾಂಶ ಬೇರೆಯುವುದರಿಂದ ಇದು ಹೆಚ್ಚಿನ ಕೊಬ್ಬಿನ ಭಕ್ಷ್ಯವಾಗುತ್ತದೆ. ಸಾಂದರ್ಭಿಕ ಬಳಕೆಗೆ ಮಾತ್ರ ಸೀಮಿತವಾಗಿದೆ.

ಆಮ್ಲೆಟ್: ಖಾದ್ಯ ತೈಲ ಸವರಿದ ಬಾಣಲೆಯಲ್ಲಿ ಉಪ್ಪು ಮತ್ತು ಮೆಣಸು ಅಥವಾ ಒಣಮೆಣಸಿನ ಹುಡಿ ಸೇರಿಸಿ ಒಡೆದ ಮೊಟ್ಟೆ ಬೇಯಿಸಲಾಗುತ್ತದೆ. ಇದು ಅನೇಕ ಮೊಟ್ಟೆ ಪ್ರಿಯರಲ್ಲಿ ಜನಪ್ರಿಯವಾಗಿದೆ.


ಟೊಮೆಟೊ, ಈರುಳ್ಳಿ, ಪಾಲಕ್, ಮಶ್ರೂಮ್, ಚೀಸ್, ಸ್ಕಿಂಗ್ ಆನಿಯನ್, ಗಿಡಮೂಲಿಕೆಗಳು ಮತ್ತು ಮಸಾಲೆ ಪದಾರ್ಥಗಳನ್ನು ಆಮ್ಲೆಟ್‌ಗೆ ಸೇರಿಸಬಹುದು. ಇದು ರುಚಿ ಮತ್ತು ಸುವಾಸನೆ ಹೆಚ್ಚಿಸಲಿದೆ.

ಎಣ್ಣೆ ಅಥವಾ ಚೀಸ್ ಇಲ್ಲದ ತರಕಾರಿಗಳು, ಗಿಡಮೂಲಿಕೆಗಳು ಮತ್ತು ಮಸಾಲೆಗಳನ್ನು ಬಳಸಿ ಆಮ್ಲೆಟ್ ತಯಾರಿಸಿದರೆ, ಅದು ನಿತ್ಯದ ಊಟದಲ್ಲಿ ಸೇರಿಸಬಹುದಾದ ಆರೋಗ್ಯಕರ ಭಕ್ಷ್ಯವಾಗುತ್ತದೆ.

ಮೊಟ್ಟೆಯ ಕಸ್ಟರ್ಡ್, ಕೇಕ್, ಮೌಸ್, ಮೆರಿಂಗ್ಯೂ, ಕರಿ, ಬಿರಿಯಾನಿ, ಭುರ್ಜಿ, ನೂಡಲ್ಸ್, ಸೂಪ್, ಸಲಾಡ್, ಸೌಫಲ್, ಪಾಸ್ತಾ, ಸ್ಯಾಂಡ್‌ವಿಚ್, ಕ್ವಿಚ್ ಮತ್ತು ಇನ್ನಿತರ ಅನೇಕ ಭಕ್ಷ್ಯಗಳ ಭಾಗವಾಗಿದೆ. ಪ್ರಪಂಚದ ಕೆಲವು ಭಾಗಗಳಲ್ಲಿ ಮೊಟ್ಟೆ ಆಧಾರಿತ ಪಾನೀಯಗಳು ಎಗ್ ನಾಗ್ ಮತ್ತು ಎಗ್ ಕಾಫಿ ಜನಪ್ರಿಯವಾಗಿವೆ. ನೀವು ಕೆಲವು ಆರೋಗ್ಯ ಪ್ರಯೋಜನಗಳನ್ನು ಹುಡುಕುತ್ತಿದ್ದರೆ ಮೊಟ್ಟೆಯು ನೀವು ಆಯ್ಕೆ ಮಾಡಬಹುದಾದ ಒಂದು ಆಯ್ಕೆಯಾಗಿದೆ.

(ಲೇಖಕರು: ಪೌಷ್ಟಿಕಾಂಶ ಮತ್ತು ಕ್ಷೇಮ ಸಲಹೆಗಾರರು)

ಮೊಟ್ಟೆಯಲ್ಲಿ ಏನೆಲ್ಲ ಇದೆ?



ಪೋಷಕಾಂಶ - ಮುಖ್ಯ ಕಾರ್ಯ

ಪ್ರೋಟೀನ್ : ಬೆಳವಣಿಗೆ, ನಿರ್ವಹಣೆ ಮತ್ತು ದುರಸ್ತಿ/ಜೀವಕೋಶಗಳು ಮತ್ತು ಅಂಗಾಂಶಗಳ ಗುಣಪಡಿಸುವಿಕೆ ಜೊತೆಗೆ ರಚನೆಯ ಭಾಗವಾಗಿ, ಸಾಗಣೆ, ಕೆಲಸರಣೆ, ಹಾರ್ಮೋನುಗಳು, ಕಿಣ್ವಗಳು, ಪ್ರತಿಕಾಯ ಮತ್ತು ಪರ್ಯಾಯ ಶಕ್ತಿಯ ಮೂಲ.

ವಿಟಮಿನ್ ಬಿ1 ಕಾರ್ಬೋಹೈಡ್ರೇಟ್ ಚಯಾಪಚಯ ಇತರೆ
ವಿಟಮಿನ್ ಬಿ3 ಚರ್ಮ ಮತ್ತು ನರ ಆರೋಗ್ಯ, ಸಹ ಕಿಣ್ವಗಳು
ವಿಟಮಿನ್ ಬಿ5 ಚಯಾಪಚಯ ಮತ್ತು ಇತರ
ವಿಟಮಿನ್ ಬಿ6 ಚಯಾಪಚಯ, ಕಿಣ್ವ ಪ್ರತಿಕ್ರಿಯೆಗಳು, ರೋಗನಿರೋಧಕ ಶಕ್ತಿ ಇತ್ಯಾದಿ
ವಿಟಮಿನ್ ಬಿ7 ಚಯಾಪಚಯ ಇತ್ಯಾದಿ
ವಿಟಮಿನ್ ಬಿ9 ಜೀವಕೋಶ ಬೆಳವಣಿಗೆ ಮತ್ತು ಇತರ
ವಿಟಮಿನ್ ಬಿ12 ನರಗಳ ನಿರ್ವಹಣೆ, ಕೆಂಪು ರಕ್ತ ಕಣಗಳ ರಚನೆ, ಅನುವಂಶಿಕ ವಸ್ತು ಇತ್ಯಾದಿ
ವಿಟಮಿನ್ ಎ ದೃಷ್ಟಿ, ಪ್ರತಿರಕ್ಷಣಾ ಮತ್ತು ಇನ್ನಿತರ
ವಿಟಮಿನ್ ಡಿ ಕ್ಯಾಲ್ಸಿಯಂ ಹೀರಿಕೊಳ್ಳುವಿಕೆ ಇತ್ಯಾದಿ
ವಿಟಮಿನ್ ಇ ಅಂಗರ್ಷಣ ನಿರೋಧಕ, ಪ್ರತಿರಕ್ಷಣೆ ಮತ್ತು ಇತರ
ವಿಟಮಿನ್ ಕೆ ರಕ್ತ ಹೆಪ್ಪುಗಟ್ಟುವಿಕೆ,
ಕ್ಯಾಲ್ಸಿಯಂ ರಚನೆ ಮತ್ತು ಎಲುಬು ನಿರ್ವಹಣೆ ಹಾಗೂ ದಂತಗಳು, ನರಸ್ನಾಯುಕ ಕಾರ್ಯ, ರಕ್ತ ಹೆಪ್ಪುಗಟ್ಟುವಿಕೆ ಮತ್ತಿತರೆ
ಸತು ಬೆಳವಣಿಗೆ, ರೋಗನಿರೋಧಕ ಶಕ್ತಿ ಮತ್ತು ಇತರೆ
ಕಬ್ಬಿಣ ಹಿಮೋಗ್ಲೋಬಿನ್, ಶಕ್ತಿಯ ಚಯಾಪಚಯ, ಪ್ರತಿರಕ್ಷಣ ಇತ್ಯಾದಿ

13-10-2023
Prajavani Pg 02

Cracking the Eggcellent Code of Health

In the heart of a quaint village nestled among the rolling hills, there lived an elderly woman named Agnes. Her days were filled with nurturing her vibrant garden, where all the colors of blooming flowers danced in the gentle breeze. Yet, it was Agnes's lovely chickens that captivated the village's imagination. She cared for them with great tenderness that bordered on reverence, believing that these humble creatures held the secrets to a long and healthy life. To the inquisitive minds of children, Agnes often shared her wisdom, saying, "Life, my dear, is like an egg; when handled with care, it can yield treasures beyond measure". These words, passed down through generations, echoed the sentiments of millions worldwide as they gathered each year to celebrate World Egg Day.


On this special occasion, let us embark on a journey to explore the remarkable world of eggs, unravel the mysteries concealed within their fragile shells, and acknowledge their role as a daily source of nourishment. Eggs, with their innate ability to nourish and rejuvenate, often seem like little miracles themselves. This World Egg Day, make us delve into the enchantment of eggs, guided by the theme, "Eggs for a Healthy Future," as we uncover the benefits of making eggs a daily dietary staple

World Egg Day: A Global Celebration

Every second Friday of October, World Egg Day unites communities worldwide in their shared love for eggs, serving a poignant reminder of the vital role eggs play in our lives, not only as a source of nourishment but also as a symbol of hope and potential.

This year's theme, "Eggs for a Healthy Future," underscores their accessibility and affordability for people from all walks of life.

The Remarkable Egg: A Nutritional Powerhouse



Eggs have long held a perfect reputation as the great nutritional power house for good reason. They are a rich source of a high-quality protein, vitamins, minerals along with essential nutrients that promote overall well-being. Some of the compelling reasons to include eggs in the daily diet.

1 **A Protein Marvel:** Often referred to as the "perfect protein," eggs contain all the essential amino acids the body requires. This makes them an excellent choice for muscle building, repair, and growth. With approximately 6 grams of protein per large egg, they offer a convenient and versatile source of this vital nutrient.

2 **A Bounty of Vitamins and Minerals:** Eggs are a treasure trove of essential vitamins and minerals. They are rich in Vitamin A, which supports healthy vision, and Vitamin B12, vital for nerve function and the formation of red blood cells. Additionally, eggs provide Vitamin D, crucial for bone health, and a range of B vitamins that support metabolism and overall vitality.

3 **Brain-Boosting Choline:** Eggs are a significant source of choline, an essential nutrient crucial for brain development and function. Choline plays a role in memory, muscle control and the structure of cell membranes. Adequate choline intake is especially important during pregnancy, as it contributes to fetal brain development.

4 **Guardians of Eye Health:** Eggs are equipped with the two potent antioxidants, the lutein and zeaxanthin, known for their protective effects on eye health. These antioxidants can reduce the risk of age -related macular degeneration and cataracts, helping to keep your vision clear and sharp.

5 **A Friend to Weight Management:** Eggs are a dieter's ally. Their high protein content helps you feel full and satisfied for longer, reducing the urge to snack between meals.

6 **Heart - Healthy Nutrition:** Contrary to past concerns, research has shown that egg consumption does not significantly affect heart disease risk. In fact, eggs can raise levels of "good" HDL cholesterol and improve your overall cholesterol profile. They also contain nutrients like folate, which support cardio vascular health.

7 **Economical & Environmentally Friendly:** Eggs are among the most affordable sources of high-quality protein available. They offer a cost-effective way to meet your daily nutritional needs. Additionally, the environmental impact of the egg production is relatively low compared to the other animal-based proteins, making them a sustainable choice.

Making Eggs a Daily Habit: A Recipe for Health

Now as we have known the myriad benefits of the eggs, lets try to incorporate them into the daily diet with some egg-citing ideas:

- **Start Your Day Right:** Kick off the mornings with a protein-packed breakfast. Scrambled eggs with veggies, a fluffy omelet, or a sunny-side-up egg on whole-grain toast.
- **A Wholesome Snack:** Hard-boiled eggs make for a convenient and nutritious snack. Keep a few in your refrigerator for a quick and satisfying pick-me-up between meals.
- **Versatile Ingredients:** Eggs are culinary chameleons, capable of transforming into a multitude of dishes from quiches and frittatas to egg salads and soufflés.
- **Baking Marvels:** Eggs are essential in baking, as they provide structure, moisture, and richness to cakes, cookies, and bread.
- **Salad Enhancers:** Elevate your salads by adding sliced boiled eggs to enhance flavour but also boost the protein content, making your salad more satisfying.
- **Creative Devilled Eggs:** Get inventive with devilled egg recipes. Experiment with various toppings and fillings to create delightful and nutritious appetizers.
- **Egg Curry:** Explore international flavours by preparing egg curry dishes from different cuisines.

A Healthier Tomorrow with Eggs:

Eggs, with their affordability, versatility and a rich nutritional content, offer a pathway to more healthier future for individuals and communities worldwide. Embrace the egg, treasure its goodness, and make it a part of your daily journey towards well-rounded health and vitality. Remember the wisdom of Agnes, and treat each egg with care, for within its delicate shell lies the promise of a golden life.

13-10-2023
Hindu Pg 05

13-10-2023
Hindu Pg 08

Tea industry in 'acute financial crisis', says Indian Tea Association in a report

Press Trust of India
KOLKATA



The Indian Tea Association (ITA), a leading body of tea planters, on Thursday said the industry is passing through a phase of acute financial crisis with prices not keeping pace with the rising cost of production.

The ITA, in its status paper 'Tea scenario 2023,' said while tea prices rose at a compounded annual growth rate (CAGR) of about 4% over the last decade, cost of vital inputs such as coal and gas grew at a CAGR of 9-15% during the same period.

Besides, the exponential increase in production following the emergence of small tea growers resulted in surplus teas remaining in the system as domestic consumption and exports have not grown to absorb it, the status paper said.

On the price trends of the beverage during the current fiscal, it said tea prices declined alarmingly in 2023 compared with 2022. The auction prices of CTC and dust teas covering sale numbers 14 to 39 are down by ₹12.49 per kg for Assam tea and ₹11.30 a kg for tea from West Bengal.

Auction prices for the orthodox variety are also down by ₹95 per kg covering the same sale numbers.

The ITA said while in 2022, tea exports showed some signs of revival and touched 231 million kg, it slid by 2.61 million kg during January to July in 2023.

Iran exports drop

The export scenario is grim as shipments to Iran, which constitutes almost 20% of total tea exports from India, are uncertain. This is due to the payment issues causing financial stress to exporters.

To mitigate the situation, the industry urged the government to consider enhancing RoDTEP (remission of duties or taxes on export products) incentive cap for high quality CTC, orthodox and Darjeeling teas.